ರಮೇಶ ಜ. ಬೊಂಗಾಳೆ, ಬೈಲಹೊಂಗಲ

ಪುಸ್ತಕಕ್ಕೂ, ಮಸ್ತಕಕ್ಕೂ ವ್ಯತ್ಯಾಸವೇನು?



ಪುಸ್ತಕ ವಿಷಯಗಳ ಜಲಾಶಯ; ಮಸ್ತಕ ಕಾಲುವೆ.

ಪಿ.ಜೆ. ರಾಘವೇಂದ್ರ, ಮೈಸೂರು

ಟಿಕೆಟ್ ತೆಗೆದುಕೊಳ್ಳುವ ವಯಸ್ಸಾದವರೂ ಟಿಕೆಟ್ ಆಕಾಂಕ್ಷಿಗಳಾಗಿದ್ದಾರಲ್ಲಾ?

ಟಿಕೆಟ್ ಪಡೆದವನು 'ಟಿಕೆಟ್' ಪಡೆದರೆ ವಾರಸುದಾರರಿಗೆ ಟಿಕೆಟ್ ಸಿಗುವ ಸಂಭವ ಇದೆಯಲ್ಲ.

ಡಾ. ಸೀಮಂತಿನಿ ದೇಸಾಯಿ, ಬೆಂಗಳೂರು

ಮಳೆಗಾಲದಲ್ಲಿ ಚುನಾವಣೆ ನಡೆಸಲು ಸರ್ಕಾರಕ್ಕೆ ಭಯವೆ?

ಮಳೆಯಲ್ಲಿ ನೆನೆದು ಕುಡಿದ ನಶೆ ಇಳಿದುಬಿಟ್ಟರೆ ಯೋಗ್ಯರಿಗೇ ಮತ ಹಾಕಿಬಿಟ್ಟಾರೆಂಬ ಭಯ ಇರುತ್ತದೆ.

ವಿ. ಹೇಮಂತಕುಮಾರ್, ಬೆಂಗಳೂರು

ಆಂಟಿಯೊಬ್ಬರು ಎಲ್ಲರನ್ನೂ ಮುಟ್ಟಿ ಮುಟ್ಟಿ ಮಾತನಾಡಿಸುತ್ತಾರಲ್ಲಾ...?



ಪ್ರತ್ಯಕ್ಷಿಸಿದ್ದನ್ನು ಪ್ರಮಾಣಿಸಿ ನೋಡುತ್ತಿದ್ದಾರಷ್ಟೆ.

ಕಾವ್ಯಶ್ರೀ ಪತ್ರಿಮಠ, ಶೋರಾಪುರ

ಸಹಜ ಸೌಂದರ್ಯ ಎಲ್ಲಿ ಅಡಗಿದೆ?

ಫೇಸ್‌ಪ್ಯಾಕ್, ಹಾಟ್ ವ್ಯಾಕ್ಸ್ ಮುಂತಾದವುಗಳ ಅಡಿಯಲ್ಲಿ.

ವಿ. ಹಮೀದ್, ವಿಟ್ಲ

ಕ್ಲಾಸಿನಲ್ಲಿ ಟೀಚರ್ ಹುಡುಗರ ಕಡೆಗೇ ನೋಡುತ್ತಿರುವುದೇಕೆ?

ಗಂಭೀರತೆಗಿಂತ ಮಂಗನಾಟ ಹೆಚ್ಚು ಗಮನ ಸೆಳೆಯುತ್ತದೆ.

ಕುಬೇರಪ್ಪ ಎಂ. ವಿಭೂತಿ, ಹರಿಹರ

ಮತವನ್ನು ಮಾರಿಕೊಂಡ ಪ್ರಜೆಗಳಿಗೆ ಹಕ್ಕನ್ನು ಕೇಳುವ ಅಧಿಕಾರವಿದೆಯೆ ಗುರುವೆ?

ಹ್ಞ! ಸಾಕುನಾಯಿಗೆ ಬೇಕೆನಿಸಿದಾಗ ಬೊಗಳಲೂ ಸ್ವಾತಂತ್ರ್ಯ ಇರುವುದಿಲ್ಲ.

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ

ಓಲ್ಡ್ ಈಸ್ ಗೋಲ್ಡ್ ಎನ್ನುತ್ತಾರೆ. ಇದು ಯಾವುದಕ್ಕೆ ಅನ್ವಯಿಸುತ್ತದೆ?

ಸ್ಕಾಟ್ಲೆಂಡಿನ ಹಗೇವುಗಳಿಂದ ತೆಗೆಯುವ ದುಬಾರಿ ವಿಸ್ಕಿ ಬಾಟಲುಗಳಿಗೆ.

ಬಿ. ಚಂದ್ರೇಗೌಡ, ಬೆಂಗಳೂರು

ಬದುಕಿನ ಸಾಕ್ಷಾತ್ಕಾರ ಮದುವೆಯಿಂದ ಮಾತ್ರ ಸಾಧ್ಯವಂತೆ, ಹೌದೆ?

'ಸಾಕ್ಷಾಕು' ಎನ್ನಿಸುವುದು, 'ಖಾರ' ಎನ್ನಿಸುವುದಂತೂ ಸತ್ಯ.

ವಿ. ಮಾಧವ ಶ್ಯಾನುಭಾಗ, ಕುಂದಾಪುರ

ಯಾವುದೇ ಸಾಧಕರನ್ನು ಪರಿಚಯಿಸುವಾಗ 'ಇವರದು ದೈತ್ಯಪ್ರತಿಭೆ' ಎನ್ನುತ್ತಾರೆ. 'ದೇವಪ್ರತಿಭೆ' ಯಾಕಲ್ಲ?

'ದೇವ' ಎಂದರೆ ಎಂದೋ ಕಂಡು ಮರೆಯಾಗುವಂಥದ್ದು. 'ದೈತ್ಯ' ದೀರ್ಘಕಾಲ ಸಮಾಜದ ಮುಂದಿರುವಂಥದ್ದು.

ಚಾರ್ವಾಕ ಶ್ರೀನಿವಾಸ, ಬೆಂಗಳೂರು

'ನ ಸ್ತ್ರೀ ಸ್ವಾತಂತ್ರ್ಯಂ ಮರ್ಹತಿ' ಎಂದ ಮನು ಈಗ ಇದ್ದಿದ್ದರೆ ಏನು ಹೇಳುತ್ತಿದ್ದ?

ಲಿವಿಂಗ್ ಟುಗೆದರ್ ಅನ್ನು ಕಂಡು 'ಪುರುಷಶ್ಚ ಸ್ತ್ರೀ ಸ್ವಾತಂತ್ರ್ಯಂ ಇಚ್ಛಂತಿ' ಎನ್ನುತ್ತಿದ್ದ.

ಸುಶೀಲಾ ಎಸ್. ಪಾಟೀಲ್, ಸಂಕೇಶ್ವರ

ಕೆಲವರು ಮುಂಜಾನೆಯೆದ್ದು ಸ್ನಾನ ಮಾಡದೆಯೇ ಹೊಸ್ತಿಲ ಪೂಜೆ ಮಾಡುತ್ತಾರೆ. ಏಕೆ?

ಮೊದಲು ಮನೆ, ನಂತರ ಸ್ವಾರ್ಥ ಎಂಬ ಶ್ರೇಷ್ಠ ಗುಣ ಇರುವುದರಿಂದ!

ಶೃತಿ ರಿಗ್ರೆಟ್ ಐಯ್ಯರ್, ಅಮೆರಿಕ

ಮನೆ ಆಯ್ತು; ಮಠ ಆಯ್ತು. ನಂತರ?

ಕೆಲವು ಮಠ'ದಯ್ಯ'ಗಳಿಗೆ ಮಠದಲ್ಲೇ ಸಂಸಾರವೂ, ಮನೆಯೂ ಆಯ್ತು.

## ವಾರದ ಪ್ರಶ್ನೆ

ಮಲ್ಲಿಕಾರ್ಜುನ ಹ. ಬಗಲಿ, ಜತ್ತ

ಮನುಷ್ಯನಿಗೆ ಕೂದಲೇ ಇಲ್ಲದಿದ್ದರೆ ಏನಾಗುತ್ತಿತ್ತು?

'ಸಿರಿಮುಡಿಗೆ ಕೈಯಿಕ್ಕದನಲಾ' ಎಂದು ಕುಮಾರವ್ಯಾಸ ಬರೆಯಲು ಆಗುತ್ತಿರಲಿಲ್ಲ.

ಬಾ.ರಂ. ಸುರೇಶ್, ಶಿವಮೊಗ್ಗ

ಇತ್ತೀಚೆಗೆ ಹೆಚ್ಚು ಹೆಚ್ಚು ಹಾಸಿಗೆಗಳ ಆಸ್ಪತ್ರೆಗಳು ಪ್ರಾರಂಭವಾಗುತ್ತಿರುವುದು ಏನನ್ನು ಸೂಚಿಸುತ್ತದೆ ಶಿವಾ?

ಹಾಸಿಗೆ ಮಾರುವವರಿಗೆ ಶುಕ್ರದೆಸೆ!

ಪಿ. ಜಯವಂತ ಪೈ, ಕುಂದಾಪುರ

ತಣ್ಣೀರಿಗೂ, ಕಣ್ಣೀರಿಗೂ ವ್ಯತ್ಯಾಸವೇನು?

ಮಳೆಯಿಲ್ಲದಾಗಲೂ ತಮಿಳುನಾಡಿಗೆ ನೀರು ಬಿಟ್ಟರೆ ಅವರಿಗೆ ಅದು ತಣ್ಣೀರು, ನಮಗೆ ಕಣ್ಣೀರು.

ಅನಸೂಯ ಟಿ. ಕೇದಿಗೆಮನೆ

ಹರಿದ ಬಟ್ಟೆಯನ್ನು ಧರಿಸಿದ ಆ ಕಾಲಕ್ಕೂ, ಬಟ್ಟೆಯನ್ನು ಹರಿದು ಧರಿಸುವ ಈ ಕಾಲಕ್ಕೂ ವ್ಯತ್ಯಾಸ?



ಅದು ಮಾನದ ಕಾಲ, ಇದು ಸುಮ್ಮಾನದ ಕಾಲ.

ಹೆಚ್.ವಿ. ರಂಗನಾಥ, ಬೆಂಗಳೂರು

ಬಡ ಮತ್ತು ಮಧ್ಯಮವರ್ಗದ ಜನರಿಗೆ 'ಶ್ರೀಸಾಮಾನ್ಯ' ಎಂದು ಕರೆಯುವ ಔಚಿತ್ಯವೇನು?

ಅವರಲ್ಲಿ 'ಶ್ರೀ' ಉರುಫ್ ಲಕ್ಷ್ಮಿಯು ಬಹಳ ಸಾಮಾನ್ಯ ಮಟ್ಟದಲ್ಲಿ ಇರುತ್ತಾಳೆಂದು.

ಚಿಕ್ಕೋಬನಹಳ್ಳಿ ಚಾಂದ್ ಬಾಷ, ತಳಕು

ಅಕ್ರಮವೇ ಸಕ್ರಮದ ವಿರುದ್ಧ ದೂರು ನೀಡಿ ಕ್ರಮ ಕೈಗೊಳ್ಳಿ ಎಂದರೆ?

ಆ ಕುಕ್ರಮವೇ ವಿಕ್ರಮವೆನ್ನುವ ಕುಕರ್ಮಿಗಳು ಇದ್ದಾರಲ್ಲ. ಆ ಗುಂಪನ್ನೇ ನಾವು ಸರ್ಕಾರ ಎನ್ನುವುದು.

■ **ರಾಮ್**